◆ 'ರಾವಣ: ಎನಿಮಿ ಆಫ್ ಆರ್ಯಾವರ್ತ' ನಿಮ್ಮ ಇತ್ತೀಚಿನ ಕೃತಿ. ರಾವಣ ಆರ್ಯಾವರ್ತದ ಶತ್ರು ಎಂದು ನಿಮಗೆ ಯಾಕನಿಸಿತು?

ರಾಮಚಂದ್ರ ಸರಣಿಯ ಮೊದಲ ಎರಡು ಪುಸ್ತಕಗಳಲ್ಲಿ, ರಾವಣ ಹುಟ್ಟಿದ ನೆಲವೇ ಆತನನ್ನು ತಿರಸ್ಕರಿಸಿತ್ತು ಎನ್ನುವಂತೆ ಕಥೆ ಬರೆದೆ. ಆದ್ದರಿಂದ ಈ ಪುಸ್ತಕಕ್ಕೆ ಮೊದಲು 'ರಾವಣ, ಆರ್ಫನ್ ಆಫ್ ಆರ್ಯಾವರ್ತ' ಎಂದು ಹೆಸರು ಕೊಟ್ಟಿದ್ದೆ. ಆತನ ಹುಟ್ಟಿದ ನೆಲದ ಕುರಿತು ಜನಪದ ಕಥೆಗಳಿವೆ. ಅವುಗಳ ಪ್ರಕಾರ ಆತನು ದೆಹಲಿಗೆ ಹತ್ತಿರದ ಹಳ್ಳಿಯೊಂದರಲ್ಲಿ ಹುಟ್ಟಿದವ. ರಾವಣನನ್ನು ಪೂಜಿಸುವ ಹಳೇ ದೇವಸ್ಥಾನವೊಂದು ಈಗಲೂ ದೆಹಲಿಯಲ್ಲಿದೆ. ಆದರೆ, ಈ ಪುಸ್ತಕ ಬರೆಯಲು ಪ್ರಾರಂಭಿಸಿದ ಮೇಲೆ ಗೊತ್ತಾಯಿತು – ಆತನ ನೆಲ ಆತನನ್ನು ತಿರಸ್ಕರಿಸಲಿಲ್ಲ, ಬದಲಾಗಿ ಅವನೇ ತನ್ನ ನೆಲವನ್ನು ತಿರಸ್ಕರಿಸಿದ ಎನ್ನುವುದು. ಹಾಗಾಗಿ ಪುಸ್ತಕದ ಹೆಸರು ಬದಲಾಯಿಸಿದೆ.

ರಾವಣ ಒಳಗೊಳಗೆ ಯಾತನೆ ಅನುಭವಿಸುತ್ತಿದ್ದ. ಅವನು ಅನುಭವಿಸಿದ ಯಾತನೆ ಯಾವುದೇ ಇರಬಹುದು, ಅದಕ್ಕೆ ಆತ ಹೇಗೆ ಸ್ಪಂದಿಸಿದ ಎನ್ನುವುದು ಮುಖ್ಯ. ರಾಮನಂಥವರು ಯಾತನೆಗಳನ್ನು ಗೌರವಿಸುತ್ತಾರೆ. ಸೀತೆ ಯಾತನೆಯನ್ನು ಸವಾಲಾಗಿ ಸ್ವೀಕರಿಸುತ್ತಾಳೆ. ಆದರೆ, ರಾವಣ ಸಿಟ್ಟಿನಿಂದ ಯಾತನೆಗಳನ್ನು ಎದುರಿಸುತ್ತಾನೆ. 'ಜಗತ್ತು ನನಗೆ ನೋವು ನೀಡಿದೆ. ಆದ್ದರಿಂದ ನಾನು ಜಗತ್ತನ್ನೇ ಸುಟ್ಟು ಬಿಡುತ್ತೇನೆ' ಎನ್ನುವ ಮನೋಭಾವ ರಾವಣನದು. ಆದ್ದರಿಂದಲೇ ಆತ ಆರ್ಯಾವರ್ತದ ಶತ್ರು.

◆ ನಿಮ್ಮ ದೃಷ್ಟಿಯಲ್ಲಿ 'ಉದಾರವಾದ' (ಲಿಬರಲಿಸಂ) ಅಂದರೆ ಏನು?

ಉದಾಹರಣೆ ಮೂಲಕ ವಿವರಿಸಲು ಪ್ರಯತ್ನಿಸುತ್ತೇನೆ. 'ರಾಮಾಯಣ ದರ್ಶನಂ'ನಲ್ಲಿ ಲಕ್ಷ್ಮಣರೇಖೆಯ ಪ್ರಸ್ತಾಪ ಇಲ್ಲ. ಕಂಬ–ವಾಲ್ಮೀಕಿ ರಾಮಾಯಣದಲ್ಲೂ ಲಕ್ಷ್ಮಣರೇಖೆಯಿಲ್ಲ. ಆದರೆ, ಹೆಚ್ಚು ಮಂದಿ, ಲಕ್ಷ್ಮಣರೇಖೆ ಪ್ರಸ್ತಾಪ ಇತ್ತು ಅಂತಲೇ ನಂಬಿದ್ದಾರೆ. ಇದು 'ತುಳಸಿರಾಮಾಯಣ'ದಿಂದ ಬಂದಿದ್ದು. ಉತ್ತರ ಭಾರತದಲ್ಲಿ ದೇವ ಕಾರ್ತಿಕನಿಗೆ ಹೆಂಡತಿಯರಿಲ್ಲ. ಆದರೆ, ತಮಿಳುನಾಡಿಗೆ ಹೋದರೆ ಆತನಿಗೆ ಇಬ್ಬರು ಹೆಂಡತಿಯರಿದ್ದಾರೆ. ಕೆಲವು ಕಡೆ ಕಾರ್ತಿಕ ದೇವರ ದೇವಸ್ಥಾನಗಳಿಗೆ ಮಹಿಳೆಯರು ಪ್ರವೇಶ ಮಾಡುವುದಿಲ್ಲ. ಹೀಗೆ ಹಲವು ಸತ್ಯಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ಗುಣ ಸ್ವಾಭಾವಿಕವಾಗಿ ನಮ್ಮಲ್ಲಿದೆ.

ಯಾವುದೇ ಪುರಾಣ ಕಥೆಗಳನ್ನು ಹೊಸದಾಗಿ ವ್ಯಾಖ್ಯಾನ ಮಾಡಿ. ಆದರೆ, ಗೌರವಯುತವಾಗಿ ಮಾಡಿ. ಆಗ ವಿವಾದ ಆಗುವುದಿಲ್ಲ. ನನ್ನ ಪುಸ್ತಕಗಳಲ್ಲೂ ಅಷ್ಟೇ. ನಾನು ತುಂಬಾ ಗೌರವಯುತವಾಗಿ ಬರೆಯುತ್ತೇನೆ. ನಾನು ನಮ್ಮ ದೇವರನ್ನು ನಂಬುತ್ತೇನೆ, ಪೂಜಿಸುತ್ತೇನೆ. ರುದ್ರಾಕ್ಷಿ ಹಾಕಿಕೊಳ್ಳುತ್ತೇನೆ, ಮೃತ್ಯುಂಜಯ ಜಪ ಮಾಡುತ್ತೇನೆ. ತಾಯತ ಕಟ್ಟಿಕೊಳ್ಳುತ್ತೇನೆ. ನಾನು ಬರೆಯುವ ದೇವರ ಪಾತ್ರಗಳ ಭಕ್ತ ನಾನು.

◆ ಭಾರತ ಇಂದು ಮತ್ತೆ ಹಿಮ್ಮುಖವಾಗಿ ಚಲಿಸುತ್ತಿದೆ ಅನಿಸುವುದಿಲ್ಲವೇ? ಮಹಿಳೆಯರ ಮೇಲಿನ ಶೋಷಣೆ, ಕೆಲವು ಜಾತಿ–ಧರ್ಮದವರನ್ನು ಸಮಾಜದಲ್ಲಿ ಮೂಲೆಗುಂಪು ಮಾಡುವ ಯತ್ನದ ಕುರಿತು ನೀವು ಹೇಗೆ ಪ್ರತಿಕ್ರಿಯಿಸುವಿರಿ?

ಇದೆಲ್ಲವೂ ಆಗುತ್ತಿರುವುದು ನಿರ್ಲಕ್ಷ್ಯದಿಂದ. ಹೀಗೆಲ್ಲಾ ಮಾಡುವವರಿಗೆ ನಮ್ಮ ಸಂಪ್ರದಾಯದ ಪರಿಚಯ ಇಲ್ಲ. ನಮ್ಮ ಸಂಸ್ಕೃತಿ, ಸಂಪ್ರದಾಯದ ಸರಿಯಾದ ಪರಿಚಯ ಇದ್ದಿದ್ದರೆ, ಈ ರೀತಿಯ ಸಮಸ್ಯೆಗಳೇ ಉದ್ಭವಿಸುತ್ತಿರಲಿಲ್ಲ. ಮಹಿಳೆಯರು ಧರ್ಮಗ್ರಂಥಗಳನ್ನು ಓದಬಾರದು ಎನ್ನುತ್ತಾರೆ